# OS- 197/2016 P.W.2

ದಿನಾಂಕ 06.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು :</u>** ಪ್ರತಿವಾದಿಯ ಪರ ವಕೀಲರಿಂದ :-

ಈ ದಾವೆಯನ್ನು ವಾದಿ ಪ್ರತಿವಾದಿಗಳ ವಿರುದ್ದ ಸಲ್ಲಿಸಿರುತ್ತಾರೆ. ನನಗೆ ಈ ದಾವೆಯ ಪ್ರತಿವಾದಿಯ ಪರಿಚಯ ಇಲ್ಲ. ನನಗೆ ಪುಟ್ಟಪ್ಪನವರು ಪರಿಚಯ ಇರುತ್ತಾರೆ. ಈ ದಾವೆಯನ್ನು ಸೋಮಶೇಖರ್ ರವರ ಸ್ವತ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ಹೂಡಿರುತ್ತಾರೆ. ವಾದಿಯು ದಾವಾ ಅಸ್ತಿಯನ್ನು ರಿಯಾಜ್ ರವರಿಂದ ಕ್ರಯ ಪಡೆದಿರುತ್ತಾರೆ. ಸದರಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿಲ್ಲ. ದಾವಾ ಅಸ್ತಿಯ ವಿಸ್ತೀರ್ಣ 105 x 34 ಅಡಿಗಳು. ವಾದಿಯ ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಪುಟ್ಟಪ್ಪನ ಮನೆ. ಪುಟ್ಟಪ್ಪ ನವರ ಮನೆಯ ಪೂರ್ವದ ಕಡೆ ರಸ್ತೆ ಇದೆ ಎಂದರೆ ಸರಿ. ಪುಟ್ಟಪ್ಪ ನವರ ಉತ್ತರಕ್ಕೆ ಸೋಮಶೇಖರ್ ರವರ ಖಾಲಿ ನಿವೇಶನ ಇದೆ. ದಕ್ಷಿಣಕ್ಕೆ ಮೊದಲಿಯರ್ ರಮೇಶ್ ರವರ ವಠಾರ ಇದೆ. ಪಶ್ಚಿಮದ ಕಡೆ ಪುರಸಭೆಯ ರಸ್ತೆ ಇದೆ. ರಸ್ತೆಯ ಪಕ್ಕ ಚರಂಡಿ ಇದೆ ಎಂದರೆ ಸರಿ. ವಾದಿ ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಒಂದು ಹೆಂಚಿನ ಮನೆ ಇತ್ತು ಎಂದರೆ ಸರಿ. ಸದರಿ ಮನೆಯ ವಿಸ್ತೀರ್ಣ 105 x 34 ಅಡಿಗಳು. ಸದರಿ ವಿಸ್ತೀರ್ಣದಲ್ಲಿ ಈಗಲೂ ಸಹ ಪೂರ್ಣ ಮನೆ ಇದೆ ಎಂದರೆ ಸರಿಯಲ್ಲ. ಮನೆ ಈಗ ಹೊಡೆದು ಹಾಕಿರುತ್ತಾರೆ. ಸದರಿ ವಿಚಾರವನ್ನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ಪ್ರತಿವಾದಿಗಳು ವಾದಿಯ ವಿರುದ್ದ ಒಂದು ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿಯೂ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ನಾನು ವಾದಿಯ ಸ್ನೇಹಿತ. ನಾನು ವಾದಿಗೆ ಸುಮಾರು 15 ವರ್ಷಗಳಿಂದ ಸ್ನೇಹಿತ. ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ವಾದಿ ನನಗೆ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.